ನಾಗರೀಕರಿಗೆ ಒಟ್ಟು ಎಷ್ಟು ಪಡಿತರ ಚೀಟಿಗಳನ್ನು ವಿತರಿಸಲಾಗಿದೆ?

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) 7732 ಅರ್ಜಿಗಳು ಸ್ವೀಕೃತವಾಗಿದೆ

5768 ಪಡಿತರ ಚೀಟಿಗಳನ್ನು ವಿತರಿಸಿದೆ.

ಆ) ಪಡಿತರ ಚೀಟಿ ವಿತರಣೆಗಾಗಿ ನಿಗದಿಪಡಿಸಿರುವ ಅರ್ಜಿ ನಮೂನೆಯಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿರುವ ಬಗ್ಗೆ ವಿವರಗಳನ್ನು ಒದಗಿಸುವ ಕಾಲಂ ಇರುವುದಿಲ್ಲಾ. ಆದರೆ ಯಾವುದೇ ವ್ಯಕ್ತಿಯು ತಾನು ವಾಸಿಸುತ್ತಿರುವ ವಿಳಾಸಕ್ಕೆ ಸಂಬಂದಿಸಿದಂತೆ ಮಾಹಿತಿ ಒದಗಿಸಲು ಮತದಾರರ ಪಟ್ಟಿಯನ್ನು ಸಲ್ಲಿಸಲು ಅವಶ್ಯವೆನಿಸಿದಲ್ಲಿ ಅನುವು ಮಾಡಿದೆ.

ವಿದ್ಯುತ್ ಮಂಡಲಿ ಖಾಸಗೀಕರಣ

2937:(4075)

ಶ್ರೀ ಬಸವನಗೌಡ ರಾ.ಪಾಟೀಲ್ (ವಿಜಾಪುರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್‌ಖಾಸಗೀಕರಣಗೊಳಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಖಾಸಗೀಕರಣ ಸಾಮಾಜಿಕ ಕನಿಷ್ಠ ಕಾರ್ಯ ಕ್ರಮಗಳಿಗೆ ಪೂರಕವಾಗಬಹುದೇ?

ಇ) ಈಗಾಗಲೇ ಸರ್ಕಾರ ಘೋಷಿಸಿರುವ ರೈತರ ಪಂಪುಸೆಟ್ಟುಗಳ ರಿಯಾಯಿತಿ ಸೌಲಭ್ಯದಿಂದ ರಾಜ್ಯದ ರೈತರು ವಂಚಿತರಾಗಬಹುದೇ?

ಈ) ಖಾಸಗೀಕರಣಗೊಳಿಸಿದ ಕಟ್ಟುನಿಟ್ಟಿನ ಕ್ರಮಗಳ ಮುಖಾಂತರ ಸೋರಿಕೆ ನಿಲ್ಲಿಸಿ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡು ಕೈಗಾರಿಕಾ ವಲಯದಿಂದ ಬರಬೇಕಾದ ಬಾಕಿ ವಸೂಲಿ ಇನ್ನಿತರ ಪುನಶ್ಚೇತನ ಮುಖಾಂತರ ಕರ್ನಾಟಕ ವಿದ್ಯುತ್ ಮಂಡಳಿ ರಚಿಸಲು ಸಾಧ್ಯವಿಲ್ಲವೇ?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

ಅ) ಖಾಸಗೀ ವಲಯವು ವಿದ್ಯುತ್ ವಿತರಣೆಯಲ್ಲಿ ಭಾಗವಹಿಸುವ ವಿಷಯವು

ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಇದನ್ನು ತಾತ್ವಿಕವಾಗಿ ಸರ್ಕಾರವು ಒಪ್ಪಿದೆ.

ಆ) ಉತ್ತಮ ಗ್ರಾಹಕ ಸೇವಗೆ ಕಾರಣವಾಗುವ ಹೆಚ್ಚಿನ ಚಾಲನಾ ಸಕ್ಷಮತೆ-ಗ್ರಾಹಕರಿಗೆ ಕಡಿಮೆ ವೆಚ್ಚ ಪ್ರಸರಣಾ ಮತ್ತು ವಿತರಣೆಯಲ್ಲಿ ಖಾಸಗೀ ಕ್ಷೇತ್ರದ ಭಾಗವಹಿಸುವಿಕೆಯು ವಿದ್ಯುತ್ ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಗೆ ಅವಕಾಶವಾಗಿ ಇದರಿಂದ ರಾಜ್ಯದ ಹಾಗೂ ಶ್ರೀಸಾಮಾನ್ಯರ ಸರ್ವತೋಮುಖ ಅಭಿವೃದ್ಧಿಗೆ ಸಾಮಾಜಿಕ ಮಟ್ಟದ ಉನ್ನತೀಕರಣಕ್ಕೆ ಅವಕಾಶವಾಗುತ್ತದೆ.

ಇ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ರೈತರ ಪಂಪುಸೆಟ್ಟುಗಳಿಗೆ ಈಗಾಗಲೇ ಪೂರೈಸಿರುವ ರಿಯಾಯಿತಿ ಸೌಲಭ್ಯಗಳನ್ನು ಯಾವುದೇ ರೀತಿಯಲ್ಲಿ ಹಿಂತೆಗೆದುಕೊಳ್ಳುವ ಉದ್ದೇಶವಿರುವುದಿಲ್ಲ.

ಈ) ವಿದ್ಯುತ್ ಸೋರುವಿಕೆಯನ್ನು ತಡೆಗಟ್ಟಲು ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಕಾರ್ಯಗತಗೊಳಿಸಿದೆ. ಸುಮಾರು 2.8 ಲಕ್ಷ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸಲಾಗಿದೆ. ಕಳ್ಳತನದ ಸಾಧ್ಯತೆಯಿರುವ ಸ್ಥಾವರಗಳಲ್ಲಿ ಹಾಗೂ ಪ್ರದೇಶಗಳಲ್ಲಿ ಟ್ಯಾಂಪರ್ ಪ್ರೂಫ್ ಮೀಟರ್‌ಗಳನ್ನು ಅಳವಡಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗಿದೆ. ಎಲ್ಲೆಲ್ಲಿ ವಿದ್ಯುತ್ ಕಳವು ಸಾಧ್ಯತೆ ಇದೆಯೋ ಅಲ್ಲಿ ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸರ್ಕಾರ ಔದ್ಯಮಿಕ ಮತ್ತು ಅತಿ ದೊಡ್ಡ ಕೈಗಾರಿಕೆಗಳಿಂದ ಹೆಚ್ಚು ಬಾಕಿ ಬರಬೇಕಿದ್ದು, ಇದರ ವಸೂಲಾತಿಗೂ ಕ್ರಮ ಜರುಗಿಸಲಾಗುತ್ತಿದೆ.

ಇಂಧನ ಬೇಡಿಕೆಯು ಉತ್ಪಾದನೆಗಿಂತ ಅತಿ ಹೆಚ್ಚು ಪಟ್ಟು ಹೆಚ್ಚಾಗಿರುವುದರಿಂದ ಇಂಧನ ಕ್ಷೇತ್ರವನ್ನು ಖಾಸಗೀಕರಣಗೊಳಿಸುವುದು ಅನಿವಾರ್ಯವಾಗಿದೆ. ವಿದ್ಯುತ್ ಉತ್ಪಾದನೆ, ವಿತರಣೆ ಇತ್ಯಾದಿಗಳಲ್ಲಿ ಖಾಸಗಿಯವರು ಭಾಗವಹಿಸುವುದರಿಂದ ಸಧ್ಯದ ಪರಿಸ್ಥಿತಿಯು ಸುಧಾರಿತವಾಗುವುದೆಂದು ಭಾವಿಸಲಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆ

2938:(4074)

ಶ್ರೀ ಬಸವನಗೌಡ ರಾ.ಪಾಟೀಲ (ವಿಜಾಪುರ): ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಬರುವ ಮುಳವಾಡ ಏತ ನೀರಾವರಿ, ಗುತ್ತಿ ಬಸವಣ್ಣ ಏತ ನೀರಾವರಿ ಹಾಗೂ ಚಿಮ್ಮಲಗಿ ಏತ ನೀರಾವರಿ